**ದಿನಾಂಕ ಃ 27.06.2025**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಆರ್ ಡಬ್ಲ್ಯೂ - 1**

**ಮುಖ್ಯ ವಿಚಾರಣೆ ಃ ಎದುರುದಾರರ ಪರ ಶ್ರೀ. ಎನ್.ಜೆ.ಕೆ., ವಕೀಲರಿಂದ ಃ**

ನಾನು ಈ ಪ್ರಕರಣದಲ್ಲಿ 2ನೇ ಎದುರುದಾರನಾಗಿದ್ದು, ಈ ದಿನ ನಾನು ನನ್ನ ಮುಖ್ಯವಿಚಾರಣೆಯ ಭಾಗವಾಗಿ ನನ್ನ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ.

ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ನಿಶಾನೆಯನ್ನಾಗಿ ಗುರುತಿಸಬೇಕೆಂದು ಪ್ರಾರ್ಥಿಸುತ್ತೇನೆ.

| | |
|---|---|
| ನಿಆರ್.1 | ದಿಃ07.10.2010 ರ ನೋಟಿಫಿಕೇಶನ್ ನ ದೃಢೀಕೃತ ನಕಲು (ಪುಟ ಸಂ.1 ರಿಂದ 7) |
| ನಿಆರ್.2 | ದಿಃ16.06.2010 ರ ನೋಟಿಸ್ ನ ದೃಢೀಕೃತ ನಕಲು (ಪುಟ ಸಂ.8) |
| ನಿಆರ್.3 | ದಿಃ25.08.2011 ರ ಮಹಜರ್ ನ ದೃಢೀಕೃತ ನಕಲು (ಪುಟ ಸಂ.9 ಮತ್ತು 10) |
| ನಿಆರ್.4 | ದಿಃ17.12.2011 ರ ಅರಣ್ಯ ಇಲಾಖೆಯ ವರದಿ (ಪುಟ ಸಂ.11 ರಿಂದ 13) |
| ನಿಆರ್.5 | ವ್ಯಾಲ್ಯುಯೇಷನ್ ವರದಿ ಮತ್ತು ಇಳುವಳಿಯ ಲೆಕ್ಕಾಚಾರ ದೃಢೀಕೃತ ನಕಲು (ಪುಟ ಸಂ.14 ರಿಂದ 17) |
| ನಿಆರ್.6 | ಬೆಳೆಯ ಮೌಲ್ಯದ ನಿರ್ಧಾರ ಪಟ್ಟಿಯ ದೃಢೀಕೃತ ನಕಲು (ಪುಟ ಸಂ.18) |
| ನಿಆರ್.7 | ಸಬ್ ರಿಜಿಸ್ಟರ್ ರ ವರದಿಯ ದೃಢೀಕೃತ ನಕಲು (ಪುಟ ಸಂ.19 ರಿಂದ 24) |
| ನಿಆರ್.8 | ಆರ್.ಟಿ.ಸಿ.ಯ ದೃಢೀಕೃತ ನಕಲು (ಪುಟ ಸಂ.25) |
| ನಿಆರ್.9 | ದಿಃ28.11.2011 ರ ಡಿ.ಸಿ.ಯವರು ಮಾಡಿರುವ ಜಂಟಿ ಸಭೆಯ ನಡವಳಿಗಳು (ಪುಟ ಸಂ. 26 ರಿಂದ 30) |
| ನಿಆರ್.10 | ದಿಃ01.11.2011 ರ ಅವಾರ್ಡಿನ ದೃಢೀಕೃತ ನಕಲು. |
| ನಿಆರ್.11 | ದಿಃ31.01.2012 ರ ಅವಾರ್ಡಿನ ದೃಢೀಕೃತ ನಕಲು. |
| ನಿಆರ್.12 | ಸ್ಕೆಚಿನ ದೃಢೀಕೃತ ನಕಲು. |

(ಅರ್ಜಿದಾರರ ಪರ ವಕೀಲರು ಕಾಲಾವಕಾಶವನ್ನು ಕೋರಿರುವುದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ವಿ. ರೇಣುಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

**ದಿನಾಂಕ ಃ 29.08.2025**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಆರ್ ಡಬ್ಲ್ಯೂ - 1**

**ಮುಂದುವರೆದ ಮುಖ್ಯ ವಿಚಾರಣೆ ಃ ಎದುರುದಾರರ ಪರ ಶ್ರೀ.ಎನ್.ಜೆ.ಕೆ., ವಕೀಲರಿಂದ ಃ**

ಈ ದಿವಸ ನಾನು 2ನೇ ಎದುರುದಾರರು ನನಗೆ ಕೊಟ್ಟಿರುವ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಆರ್.13 ಎಂದು ಗುರುತಿಸಲಾಯಿತು.

**(ಅರ್ಜಿದಾರರ ಪರ ವಕೀಲರು ಕಾಲಾವಕಾಶವನ್ನು ಕೋರಿರುವುದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ ಃ 20.02.2026.**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಆರ್ ಡಬ್ಲ್ಯೂ - 1**

**<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ.ಜಿ.ಹೆಚ್., ವಕೀಲರಿಂದ ಃ</u>**

ನಾನು 2ನೇ ಎದುರುದಾರ ಕಂಪನಿಯಲ್ಲಿ ಡಿ.ಜಿ.ಎಂ. ಆಗಿ ಕೆಲಸ ಮಾಡುತ್ತಿದ್ದೇನೆ. ಗುಂಡಿಗೆರೆ ಗ್ರಾಮದ ಸಂ.ನಂ.41 ಕ್ಷೇತ್ರ 1 ಎಕರೆ 1 ಗುಂಟೆಗೆ ಸಂಬಂಧಪಟ್ಟಂತೆ ಎದುರುದಾರರು ಈ ಮೊದಲು ಕೊಟ್ಟಂತಹ ಪರಿಹಾರ ಕಡಿಮೆ ಆಗಿದ್ದು ಹೆಚ್ಚಿನ ಪರಿಹಾರ ಕೊಡಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ ಎಂದು ಗೊತ್ತು. ಪೈಪ್ ಲೈನ್ ಹಾಕುವುದಕ್ಕೋಸ್ಕರವಾಗಿ ನಮ್ಮ ಇಲಾಖೆಯಿಂದ ಅರ್ಜಿದಾರರಿಗೆ ನೋಟಿಸನ್ನು ಕೊಟ್ಟಿರುತ್ತಾರೆ. ನಾವು ಆಂಗ್ಲ ಭಾಷೆಯಲ್ಲಿ ನೋಟಿಸ್ ಕೊಟ್ಟಿರುತ್ತೇವೆ ಎನ್ನುವುದು ಸುಳ್ಳು, ಕನ್ನಡ ಭಾಷೆಯಲ್ಲಿ ಕೊಟ್ಟಿರುತ್ತೇವೆ. ಅರ್ಜಿದಾರರು ಅನಕ್ಷರಸ್ಥರಿದ್ದು ಅವರಿಗೆ ಯಾವುದೇ ಮಾಹಿತಿ ನೀಡದೆ ಅವರಿಗೆ ನೋಟಿಸ್ ಕೊಟ್ಟಿರುತ್ತೇವೆ ಎನ್ನುವುದು ಸುಳ್ಳು. ಪೈಪ್ ಲೈನ್ ಹಾಕಲು ಸರ್ವೆ ಮಾಡುವ ಸಲುವಾಗಿ ಗ್ರಾಮ ಸಭೆ ಸೇರಿದ್ದು ಅದರಲ್ಲಿ ರೈತ ಮುಂಖಡರು ಮತ್ತು ಶಾಸಕರು ಸಹ ಭಾಗವಹಿಸಿದ್ದರು. ಅರ್ಜಿದಾರರಿಗೆ ಯಾವುದೇ ಮಾಹಿತಿ ನೀಡಿಲ್ಲ ಎನ್ನುವುದು ಸರಿಯಲ್ಲ. ಅರ್ಜಿದಾರರ ಜಮೀನಿನಲ್ಲಿ ಇರುವ ತೋಟಗಾರಿಕೆಗೆ ಸಂಬಂಧಪಟ್ಟಂತೆ ಇರುವ ಮರಗಳಿಗೆ ತೋಟಗಾರಿಕಾ ಇಲಾಖಾ ಅಧಿಕಾರಿಗಳ ಮುಖಾಂತರ ಹಾಗೂ ಇನ್ನಿತರ ಮರಗಳ ಬಗ್ಗೆ ಅರಣ್ಯ ಅಧಿಕಾರಿಗಳ ಮುಖಾಂತರ ಮರಗಳ ಮೌಲ್ಯ ನಿಗದಿ ಪಡಿಸಿರುತ್ತೇವೆ. ಸದರಿ ಅರಣ್ಯ ಅಧಿಕಾರಿಗಳು ಯಾವುದೇ ವರದಿ ಕೊಡದೇ ಇದ್ದರೂ ಸಹಿತ ಅರ್ಜಿದಾರರಿಗೆ ಮೋಸ ಮಾಡಬೇಕು ಎಂಬ ಉದ್ದೇಶದಿಂದ ಸದರಿ ವರದಿಯನ್ನು ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸುಳ್ಳು. ಅರ್ಜಿದಾರರ ಜಮೀನಿನಲ್ಲಿ ಪೈಪ್ ಲೈನ್ ಅಳವಡಿಸುವ ಸಮಯದಲ್ಲಿ ಅರ್ಜಿದಾರರ ತಕರಾರು ಪಡಿಸಿರುತ್ತಾರೆ ಎನ್ನುವುದು ಸುಳ್ಳು. ಗಿಡಗಳಿಗೆ ಹಣ ನಿಗದಿಪಡಿಸಿದ ನಂತರ ಹಣವನ್ನು ಪಡೆದುಕೊಂಡ ನಂತರ ಹೆಚ್ಚಿನ ಪರಿಹಾರ ಬೇಕು ಎಂದು ತಕರಾರು ಸಲ್ಲಿಸಿರುತ್ತಾರೆ ಎನ್ನುವುದು ಸುಳ್ಳು. ಪೈಪ್ ಲೈನ್ ಅಳವಡಿಸಿದಂತಹ ಸ್ಥಳದಲ್ಲಿ ಅರ್ಜಿದಾರರಿಗೆ ಬೆಳೆ ಬೆಳೆಯಲು ಸಾಧ್ಯವಾಗುತ್ತಿಲ್ಲ ಎಂದರೆ ಸುಳ್ಳು. ಪೈಪ್ ಲೈನ್ ಅಳವಡಿಸಲು ಉಪಯೋಗಿಸಿದಂತಹ ಕ್ಷೇತ್ರ ಅದರ ಜೊತೆ ಇರುವ

ಇನ್ನಿತರ ಉಳಿದಂತಹ ಕ್ಷೇತ್ರದ ಮೌಲ್ಯ ಕಡಿಮೆ ಆಗುತ್ತದೆ ಎನ್ನುವುದು ಸುಳ್ಳು. ಕೇಂದ್ರ ರಾಜ್ಯ ಪತ್ರ ಪ್ರಕಟಣೆ ಆದ ನಂತರ ಅರಿಶಿನ ಗುಂಟೆ ಗ್ರಾಮದ ರೈತರೆಲ್ಲರೂ ಗ್ರಾಮ ಸಭೆ ಸೇರಿ ತಕರಾರು ಮಾಡಿರುತ್ತಾರೆ ಎನ್ನುವುದು ಸುಳ್ಳು. ಪೈಪ್ ಲೈನ್ ಅಳವಡಿಸಿದಕ್ಕಿಂತ ಪೂರ್ವದಲ್ಲಿ ಸರ್ವೆ ಅಧಿಕಾರಿಗಳು ಸರ್ವೆ ಮಾಡಲು ಬಂದಾಗಲೂ ಕೂಡ ಅರ್ಜಿದಾರರು ತಕರಾರು ಮಾಡಿರುತ್ತಾರೆ ಎನ್ನುವುದು ಸುಳ್ಳು. ಅರ್ಜಿದಾರರ ಜಮೀನಿನಲ್ಲಿ 15 ವರ್ಷದ 34 ಮಾವಿನ ಮರ, 25 ವಯಸ್ಸಿನ 9 ಬೇವಿನ ಮರ, 32 ವಯಸ್ಸಿನ ಒಂದು ತೇಗದ ಮರ, 12 ವರ್ಷದ 6 ನೀಲಗಿರಿ ಮರ, 32 ವರ್ಷದ ಬೇವಿನ ಮರ, 32 ವರ್ಷದ ಸುಬಾಬುಲ್ ಮರ, 20 ವರ್ಷದ ಎಲಚೆ ಮರ, 10 ವರ್ಷದ ಸೀಗೆ ಮೆಳೆ ಮರಗಳು ಇದ್ದವು ಎನ್ನುವುದು ನಿಜ. ಆ ಸಮಯದಲ್ಲಿ 1 ಗಿಡಕ್ಕೆ 2 ಸಾವಿರ ಮಾರುಕಟ್ಟೆ ಮೌಲ್ಯ ಇದ್ದರೂ ಸಹಿತ ಅದನ್ನು ಪರಿಗಣಿಸದೆ ಕಡಿಮೆ ಮಾರುಕಟ್ಟೆ ಮೌಲ್ಯ ಪರಿಗಣಿಸಿರುತ್ತೇವೆ ಎನ್ನುವುದು ಸುಳ್ಳು. ಅರ್ಜಿದಾರರ ಸಮಕ್ಷಮ ಅರಣ್ಯ ಇಲಾಖಾ ಅಧಿಕಾರಿಗಳು ಗಿಡಗಳ ಮೌಲ್ಯ ಮಾಪನ ಮಾಡಿರುತ್ತಾರೆ, ಅದಕ್ಕೆ ಸಂಬಂದಪಟ್ಟ ಮೌಲ್ಯ ಮಾಪನ ಇರುತ್ತದೆ. 2007 ಮತ್ತು 2008ನೇ ಸಾಲಿನಲ್ಲಿ ಸದರಿ ಗಿಡಗಳ ಮೌಲ್ಯ ಮಾಪನ ಮಾಡಿ 2012 ರಲ್ಲಿ ಪರಿಹಾರ ನೀಡಿರುತ್ತೇವೆ ಎನ್ನುವುದು ಸುಳ್ಳು. ಅರ್ಜಿದಾರರ ಹಾಜರಾತಿ ಇಲ್ಲದೇ ನಮಗೆ ಅನುಕೂಲವಾಗುವ ರೀತಿಯಲ್ಲಿ ಅರಣ್ಯ ಅದಿಧಕಾರಿಗಳು ಕೊಟ್ಟಂತಹ ವರದಿ ಇಟ್ಟುಕೊಂಡು ರೈತರಿಗೆ ಮೋಸ ಮಾಡುವ ಉದ್ದೇಶದಿಂದ ಕಡಿಮೆ ಮೌಲ್ಯ ಮಾಪನ ಕೊಟ್ಟಿರುತ್ತೇವೆ ಎನ್ನುವುದು ಸುಳ್ಳು.

**(ಅರ್ಜಿದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದರಿಂದ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಎಂ.ಹೆಚ್. ಅಣ್ಣಯ್ಯನವರ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ ಃ 06.03.2026.**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಆರ್.ಡಬ್ಲ್ಯೂ - 1**

**ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ.ಜಿ.ಹೆಚ್., ವಕೀಲರಿಂದ ಃ**

ಪೈಪ್ ಲೈನ್ ಅಳವಡಿಸುವ ಸಲುವಾಗಿ ತುಮಕೂರು ವ್ಯಾಪ್ತಿಯ ಜಮೀನನ್ನು ಉಪಯೋಗದ ಹಕ್ಕನ್ನು ಪಡೆದುಕೊಂಡಿರುತ್ತೇವೆ. ಆ ಗ್ರಾಮದ ಜಮೀನಿನಲ್ಲಿರುವ ಬೆಳೆಗಳಿಗೆ ಪರಿಹಾರವನ್ನು ನಾವು ಕೊಟ್ಟಿದ್ದೇವೆ. ತುಮಕೂರು ವ್ಯಾಪ್ತಿಗೆ ಸಂಬಂಧಪಟ್ಟಂತಹ ಜಮೀನಿನಲ್ಲಿ ನಾವು ಪೈಪ್ ಲೈನ್ ಅಳವಡಿಸಿದ್ದು, ಅಲ್ಲಿ ಕೊಟ್ಟಂತಹ ಪರಿಹಾರ ಅದೇ ಪ್ರಕಾರ ರಾಮನಗರದ ವಾಪ್ತಿಗೆ ಸಂಬಂಧಪಟ್ಟಂತೆ ಪೈಪ್ ಲೈನ್ ಅಳವಡಿಸಿದ್ದು ಅದಕ್ಕೆ ಕೊಟ್ಟಂತಹ ಪರಿಹಾರದಲ್ಲಿ ವ್ಯತ್ಯಾಸ ಇರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆಯಾಯ ಜಿಲ್ಲೆಯ ಜಿಲ್ಲಾಧಿಕಾರಿಗಳು ಆದೇಶ ಮಾಡಿದ ಅನ್ವಯವಾಗಿ ನಾವು ಪರಿಹಾರವನ್ನು ಕೊಟ್ಟಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಇದೇ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿದಾರರು ಹೆಚ್ಚಿನ ಪರಿಹಾರ ಕೋರಿ ಮಿಸ್.ನಂ.64/12 ಅರ್ಜಿ ಸಲ್ಲಿಸಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಮಿಸ್.ನಂ.64/12 ಪುರಸ್ಕೃತವಾಗಿ ಹೆಚ್ಚಿಗೆ ಪರಿಹಾರ ಕೊಡಲು ಆದೇಶ ಆಗಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ನ್ಯಾಯಾಲಯದ ಆದೇಶದ ಪ್ರಕಾರ ನಮ್ಮ ಇಲಾಖೆಯ ಅಧಿಕಾರಿಗಳು ಮೇಲ್ಮನವಿ ಸಲ್ಲಿಸಿರುತ್ತಾರೆ ಎನ್ನುವುದು ಗೊತ್ತಿಲ್ಲ. ಅರ್ಜಿದಾರರಿಗೆ ಹೆಚ್ಚಿಗೆ ಪರಿಹಾರ ಕೊಡಬೇಕಾಗುತ್ತದೆ ಎನ್ನುವ ಕಾರಣದಿಂದ ಅರ್ಜಿದಾರರು ಹೆಚ್ಚಿಗೆ ಪರಿಹಾರ ಪಡೆಯಲು ಅರ್ಹರಿರುವುದಿಲ್ಲ ಎನ್ನುವುದು ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಎಂ.ಹೆಚ್. ಅಣ್ಣಯ್ಯನವರ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**